## ಜ್ವಾಲಾಮುಖಿಯ ಸರ್ಟ್ಸೆ ದ್ವೀಪ

ಐಸ್‌ಲ್ಯಾಂಡ್‌ನ ದಕ್ಷಿಣ ಕರಾವಳಿ ಭಾಗದಲ್ಲಿರುವ ಸರ್ಟ್ಸೆ ದ್ವೀಪ ಸದಾ ಜ್ವಾಲಾಮುಖಿಯನ್ನು ಉಗುಳುತ್ತದೆ. ಈ ದ್ವೀಪವನ್ನು ಕೆಲವೇ ವರ್ಷಗಳ ಹಿಂದೆ ಪತ್ತೆ ಹಚ್ಚಲಾಯಿತು. ಹೊಸ ದ್ವೀಪ – ಏನಾದರೂ ಹೊಸದಿರಬಹುದು ಎಂದು ಅನ್ವೇಷಣೆಗೆ ಹೊರಡುವಂತಿಲ್ಲ. ಯಾವಾಗ ಎಲ್ಲಿ ಜ್ವಾಲಾಮುಖಿ ಸ್ಫೋಟಗೊಳ್ಳುತ್ತದೋ ಬಲ್ಲವರಿಲ್ಲ. ಸದ್ಯಕ್ಕೆ ಇದು ವಿಜ್ಞಾನಿಗಳ ಅಧ್ಯಯನಕ್ಕೆ ಸೀಮಿತವಾದ ತಾಣ.





## ನಾರ್ತ್ ಬ್ರದರ್ ದ್ವೀಪ

ನ್ಯೂಯಾರ್ಕ್ ನಗರದಲ್ಲಿರುವ ನಾರ್ತ್ ಬ್ರದರ್ ದ್ವೀಪವು ಅಮೆರಿಕದ ನಿಷೇಧಿತ ಸ್ಥಳಗಳಲ್ಲಿ ಒಂದು. ಆರಂಭದಲ್ಲಿ ಇದು ರೋಗಿಗಳನ್ನು ಇತರರಿಂದ ಪ್ರತ್ಯೇಕಿಸಿ ಇಡಲು ನಿರ್ಮಾಣಗೊಂಡ ಆಸ್ಪತ್ರೆಯಾಗಿತ್ತು. ಟೈಫಾಯ್ಡ್ ಜ್ವರದಿಂದ ಬಳಲುತ್ತಿದ್ದ ಅಮೆರಿಕದ ಮೊದಲ ಮಹಿಳೆ ಮೇರಿಯನ್ನು ಚಿಕಿತ್ಸೆಗಾಗಿ ಇಲ್ಲಿಯೇ ಕರೆತರಲಾಗಿತ್ತು. ನಂತರ ಮಾದಕವ್ಯಸನಿಗಳ ಪುನರ್ವಸತಿ ಕೇಂದ್ರವಾಗಿಯೂ ರೂಪುಗೊಂಡಿತು. ಸದ್ಯಕ್ಕೆ ಇದು ಪಕ್ಷಿಧಾಮವಾಗಿದೆ. ಹಾಗೆಂದು ಪಕ್ಷಿಗಳು ನೋಡಬೇಕೆಂದು ಈ ಪ್ರದೇಶಕ್ಕೆ ಬಂದರೆ ಜೈಲು ಸೇರಬೇಕಾದಿತು. ಯಾಕೆಂದರೆ ಜನಸಾಮಾನ್ಯರು ಈ ಪ್ರದೇಶದತ್ತ ಸುಳಿದಾಡಲು ಅವಕಾಶವಿಲ್ಲ.

## ಡ್ಯುಸೇ ಬೇಸ್

ಅಮೆರಿಕದ ವಿಲಕ್ಷಣ ನಗರ ಡ್ಯುಸೇ ಬೇಸ್ ನ್ಯೂ ಮೆಕ್ಸಿಕೊದ ಕೊಲರಾಡೊ ಗಡಿಗೆ ಸಮೀಪವಿದೆ. ಸುಮಾರು 2,699 ಮಂದಿ ಮೂಲ ಅಮೆರಿಕನ್ನರು ಇಲ್ಲಿ ವಾಸ ಮಾಡುತ್ತಿದ್ದಾರೆ. ಆದರೆ, ಇಲ್ಲೊಂದು ಭೂಗತ ಪ್ರಯೋಗಾಲಯವಿದ್ದು, ಯಾರೂ ಊಹಿಸದಂಥ ಪ್ರಯೋಗಗಳು ನಡೆಯುತ್ತಲೇ ಇರುತ್ತವೆ. ಹೊರಗಿನ ಮನುಷ್ಯರು ಒಳಗೆ ನುಸುಳದಂತೆ ತಡೆಯಲು ಈ ಪ್ರದೇಶದಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಮನೆ ಹಾಗೂ ಬೇಲಿಗಳನ್ನು ನಿರ್ಮಾಣ ಮಾಡಲಾಗಿದೆ. ಅಮೆರಿಕದ ಬಿಗಿ ಭದ್ರತಾ ಪ್ರದೇಶಗಳಲ್ಲಿ ಇದೂ ಒಂದು.





## ಡೂಮ್ಸ್‌ಡೇ ವಾಲ್ಟ್

ಕೃಷಿ ಆಸಕ್ತರು ಬೀಜಗಳನ್ನು ಸಂರಕ್ಷಿಸಿಡುವುದು ಸಾಮಾನ್ಯ. ಆದರೆ ನಾರ್ವೆಯ ಆರ್ಟಿಕ್‌ನಲ್ಲಿ ಬೀಜ ಸಂರಕ್ಷಣಾ ಘಟಕವಿದೆ. ನಾನಾ ಸಸ್ಯ ಪ್ರಭೇದದ ಬೀಜಗಳನ್ನು ಸಂರಕ್ಷಿಸಿಟ್ಟಿದ್ದಾರೆ. ಹಾಗೆಂದು ಅಲ್ಲಿಗೆ ಭೇಟಿ ನೀಡಿ, ಅಲ್ಲಿಂದ ಬೀಜ ತಂದು ಹಿತ್ತಲಿನಲ್ಲಿ ಹಾಕಬೇಕೆಂಬ ಆಸೆ ಹುಟ್ಟಿದರೆ, ಕೂಡಲೇ ಅದನ್ನು ಚಿವುಟಿ ಹಾಕಿ. ಯಾಕೆಂದರೆ ಜಾಗತಿಕ ಮಟ್ಟದಲ್ಲಿ ಆಹಾರದ ಕೊರತೆಯ ಪರಿಸ್ಥಿತಿ ಉಂಟಾದರೆ, ಅಂಥ ತುರ್ತು ಪರಿಸ್ಥಿತಿಗಾಗಿ ಬೀಜವನ್ನು ಸಂರಕ್ಷಿಸಿಡಲಾಗುತ್ತಿದೆ. ನಿಗದಿತ ದಿನದಲ್ಲಿ, ವಿಶೇಷ ವ್ಯಕ್ತಿಗಳು ಮಾತ್ರ ಇಲ್ಲಿಗೆ ಭೇಟಿ ನೀಡಬಹುದು.

## ಸ್ನೇಕ್ ಐಸ್‌ಲ್ಯಾಂಡ್

ಬ್ರೆಜಿಲ್‌ನ ಸ್ನೇಕ್ ಐಸ್‌ಲ್ಯಾಂಡ್‌ನಲ್ಲಿ ಹಾವುಗಳದ್ದೇ ಸಾಮ್ರಾಜ್ಯ. ಕಾಲಿಟ್ಟರೆ ಕ್ಷಣಮಾತ್ರದಲ್ಲಿ ಕಚ್ಚಿಸಿಕೊಂಡು ವಿಷ ಮೈ ಏರುತ್ತದೆ. ಈವರೆಗೆ ಯಾರೊಬ್ಬರು ಇಲ್ಲಿಗೆ ಭೇಟಿ ನೀಡುವ ಎಂಟೆದೆಯ ಧೈರ್ಯ ತೋರಿಲ್ಲ. ಅಬ್ಬಬ್ಬಾ ಎಂದರೆ 100 ಎಕರೆ ವಿಸ್ತೀರ್ಣವಿರುವ ಈ ದ್ವೀಪದಲ್ಲಿ ಐದು ಸಾವಿರಕ್ಕೂ ಹೆಚ್ಚು ವಿಷ ಕಾರುವ ಅಪಾಯಕಾರಿ ಕಾರ್ಕೋಟಕಗಳಿವೆ. ಇನ್ನು ನಿರುಪದ್ರವಿ ಹಾವುಗಳು, ನಾಗರಹಾವು, ಹೆಬ್ಬಾವು, ಹಸಿರು ಹಾವು, ಕನ್ನಡಿ ಹಾವು ಸೇರಿ ಹಲವು ಪ್ರಭೇದದ ಹಾವುಗಳಿವೆ. ಆಗಿದ್ದಾಗಲಿ ನೋಡಿಯೇ ಬರೋಣ ಎಂದು ಈ ದ್ವೀಪಕ್ಕೆ ಹೊರಡುವಂತಿಲ್ಲ. ಯಾಕೆಂದರೆ ಬ್ರೆಜಿಲ್ ಸರ್ಕಾರದ ನಿಯಮಾನುಸಾರ ಇಲ್ಲಿಗೆ ಭೇಟಿ ನೀಡುವುದು ಅಪರಾಧ.

